**ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ , ಚಿತ್ರದುರ್ಗ**

**2020-21 ನೇ ಸಾಲಿನ ಎಸ್. ಎಸ್. ಎಲ್. ಸಿ . ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪೂರ್ವಸಿದ್ಧತಾ ಪರೀಕ್ಷೆ**

**ವಿಷಯ:- ಕೋರ್ ವಿಷಯಗಳು (ಗಣಿತ,ವಿಜ್ಞಾನ ಮತ್ತು ಸಮಾಜ ವಿಜ್ಞಾನ) ಬಹುಆಯ್ಕೆಮಾದರಿ ಪ್ರಶ್ನೆಪತ್ರಿಕೆ**

**ಪ್ರಶ್ನೆಗಳ ಸಂಖ್ಯೆ:-120 ಅಂಕಗಳು-120 ಸಮಯ:3ಗಂಟೆಗಳು**

---

**ಕೆಳಗಿನ ಪ್ರತೀ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಗುರುತಿಸಿ ಬರೆಯಿರಿ**

**1.** 1 , -3, -7,-11 ,....ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ

a) 1 b) -3 c)-4 d )4

2. 7,11,15,.....147 ಈ ಶ್ರೇಢಿಯ 9 ನೇ ಪದ

a) 39 b)38 c)37 d)40

3. 3 ರಿಂದ ಭಾಗವಾಗುವ ಎರಡು ಅಂಕಿಸಂಖ್ಯೆಗಳ ಸಂಖ್ಯೆ ಎಷ್ಟು?

a) 25 b) 30 c) 27 d) 28

4. $a_{10} - a_5 = 200$ ಆದಾಗ ಸಾಮಾನ್ಯ ವ್ಯತ್ಯಾಸ

a) 30 b) 40 c) 50 d) 60

5. ಮೊದಲ 10 ಸ್ವಾಭಾವಿಕ ಸಂಖ್ಯೆಗಳ ಮೊತ್ತ

a) 50 b) 55 c) 60 d) 65

6. ಎರಡು ಸರಳ ರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸಿದರೆ ,ಸಮೀಕರಣಗಳ ಜೋಡಿಗಳ ಪರಿಹಾರ

a) ಅನನ್ಯ b) ಅಪರಿಮಿತ c) ಪರಿಹಾರವಿಲ್ಲ d) 4 ಪರಿಹಾರಗಳು

7. 3X+4Y+8=0 ಮತ್ತು 6X+8Y+16=0 ಈ ಸರಳ ರೇಖೆಗಳ ಜೋಡಿಗಳು

a) ಛೇದಿಸುತ್ತವೆ b) ಸಮಾಂತರ c) ಐಕ್ಯಗೊಳ್ಳುತ್ತವೆ d) ಮೇಲಿನ ಯಾವುದೂ ಅಲ್ಲ


8. 2X+3Y+5=0 ಮತ್ತು 4X+9Y+10=0 ಈ ಸರಳ ರೇಖೆಗಳ ಜೋಡಿಗಳು

a) ಛೇದಿಸುತ್ತವೆ b) ಸಮಾಂತರ c) ಐಕ್ಯಗೊಳ್ಳುತ್ತವೆ d) ಮೇಲಿನ ಯಾವುದೂ ಅಲ್ಲ

9. K ನ ಯಾವ ಬೆಲೆಗೆ X+KY+7=0 ಮತ್ತು 3X+12Y+21=0 ಈ ಸರಳ ರೇಖೆಗಳ ಜೋಡಿಗಳು ಐಕ್ಯಗೊಳ್ಳುತ್ತವೆ

a) 1 b) 2 c) 3 d) 4

PRASANTH KUMAR ROYAL'S, M.A, B.Ed, D.Ed




10. ಈ ಚಿತ್ರದಲ್ಲಿ ∠APB = $40^\circ$ ಆದರೆ ∠AOP ನ ಬೆಲೆ

a) $100^\circ$ b) $50^\circ$ c) $70^\circ$ d) $80^\circ$

11. 6 cm ತ್ರಿಜ್ಯ ವಿರುವ ವೃತ್ತಕ್ಕೆ ಅದರ ಕೇಂದ್ರದಿಂದ 10 cm ದೂರದಲ್ಲಿರುವ ಬಾಹ್ಯಬಿಂದುವಿನಿಂದ ಸ್ಪರ್ಶಕ ರಚಿಸಿದೆ.ಸ್ಪರ್ಶಕದ ಉದ್ದ

a) 11 cm b) 8 cm c) 10cm d) 9cm

12. ವೃತ್ತದ ಪರಿಧಿಯ ಮೇಲಿನ ಒಂದು ಬಿಂದುವಿನಲ್ಲಿ ರಚಿಸ ಬಹುದಾದ ಸ್ಪರ್ಶಕಗಳ ಸಂಖ್ಯೆ

a) 1 b) 2 c) 0 d) ಅಪರಿಮಿತ

13. $\Delta$DEF ~ $\Delta$ABC. DE : AB = 2 : 3 ಮತ್ತು $\Delta$DEF ನ ವಿಸ್ತೀರ್ಣವು 44 ಚದರ ಮಾನಗಳಾದರೆ , $\Delta$ABC ಯ ವಿಸ್ತೀರ್ಣವು ________ ( ಚದರ ಮಾನಗಳಲ್ಲಿ)


a) 99 b) 120 c) $\frac{17}{69}$ d) 66

14. $\Delta ABC \sim \Delta PQR$, $\frac{\Delta ABC}{\Delta PQR} = \frac{9}{4}$ ಮತ್ತು AB = 18 cm ಆದರೆ, PQ ನ ಅಳತೆಯು

a) 14 cm b) 8 cm c) 10 cm d) 12 cm

15. ಕೊಟ್ಟಿರುವ ಚಿತ್ರದಲ್ಲಿ x ನ ಬೆಲೆಯು

a) 4 cm b) 5 cm c) 8 cm d) 3 cm





16. $\Delta LMN$ ನಲ್ಲಿ $\angle L = 50^\circ$ ಮತ್ತು $\angle N = 60^\circ$, $\Delta LMN \sim \Delta PQR$ ಆದರೆ $\angle Q$ ನ ಅಳತೆ

a) $50^\circ$ b) $70^\circ$ c) $60^\circ$ d) $40^\circ$

17. ಪಕ್ಕದ ಚಿತ್ರದಲ್ಲಿ XY|| BC ಆದರೆ $\frac{AX}{AB}$ ಗೆ ಸಮನಾದುದು


a) $\frac{AX}{AY}$ b) $\frac{AX}{XB}$ c) $\frac{AY}{AC}$ d) $\frac{AC}{AY}$



18. AB= 11cm ಇರುವ ರೇಖಾಖಂಡವನ್ನು 4:7 ರಲ್ಲಿ ವಿಭಾಗಿಸಿದಾಗ ,ಎರಡನೇ ಭಾಗದ ಉದ್ದ ______ cm

A) 4 B) 7 C) 11 D) 8

19. ಈ ಚಿತ್ರದಲ್ಲಿ BC= 6 cm ಆದರೆ BC' ನ ಬೆಲೆ




a) 10 cm b) 9cm c) 8 cm d) 6 cm

20. ( $x_1$, $y_1$ ) ಮತ್ತು ($x_2$, $y_2$ ) ಬಿಂದುಗಳ ನಡುವಿನ ಮಧ್ಯಬಿಂದುವಿನ ನಿರ್ದೇಶಾಂಕಗಳು

a) $\left(\frac{x_1-x_2}{2}, \frac{y_1-y_2}{2}\right)$ b) $\left(\frac{x_1+x_2}{2}, \frac{y_1+y_2}{2}\right)$ c) $\left(\frac{x_1-y_2}{2}, \frac{y_1-x_2}{2}\right)$ d) $\left(\frac{x_1-y_1}{2}, \frac{x_2-y_2}{2}\right)$

21. (2,3 ) , (4, k) ಮತ್ತು (6,-3) ಬಿಂದುಗಳು ಸರಳರೇಖಾಗತವಾಗಿದ್ದರೆ K ನ ಬೆಲೆ

a) 3 b ) -2 c ) 2 d ) 0

22. (3,4) ಮತ್ತು (6,-3) ಬಿಂದುಗಳ ನಡುವಿನ ದೂರ

a) $\sqrt{48}$ b) $\sqrt{58}$ c) $\sqrt{84}$ d) $\sqrt{56}$

23. A( 4, -3 ) ಹಾಗೂ B ( 8, 5 ) ಬಿಂದುಗಳಗಳನ್ನು ಸೇರಿಸುವ ರೇಖಾಖಂಡವನ್ನು P ಬಿಂದುವು 3:1 ಅನುಪಾತದಲ್ಲಿ ವಿಭಾಗಿಸಿದರೆ P ಬಿಂದುವಿನ ನಿರ್ದೇಶಾಂಕಗಳು.

a) (7,6 ) b) (7,3) c) (7,5) d) (7,4 )

24. ವರ್ಗಸಮೀಕರಣದ ಆದರ್ಶರೂಪ

a) $ax^2 + bx + c$ b) $ax^2 + bx + c=0$ c) $bx + c =0$ d) $ax^2 + c =0$

25. ಶೋಧಕದ ಬೆಲೆ $b^2 - 4ac < 0$ ಆದಾಗ ಸಮೀಕರಣದ ಮೂಲಗಳ ಸ್ವಭಾವ

a) ಮೂಲಗಳು ವಾಸ್ತವ ಮತ್ತು ಸಮ b) ವಾಸ್ತವ ಮತ್ತು ಬಿನ್ನ c) ಊಹಾಮೂಲಗಳು d) ಯಾವುದೂ ಅಲ್ಲ

26. ಕೆಳಗಿನವುಗಳಲ್ಲಿ ಯಾವುದು ವರ್ಗಸಮೀಕರಣ ಅಲ್ಲ ?

a) $x^2 - 3x + 2 =0$ b) $x^2 - 2 =0$ c) $3x + 1 =0$ d ) $x^2 = 0$

27. $x^2 - 4x + 4 = 0$ ವರ್ಗಸಮೀಕರಣದ ಮೂಲಗಳು

a) ( -2, 1) b) (-2 , -2) c) (2, 2) d) (-2, 2)

28. $\cos\theta = \frac{3}{5}$ ಆದರೆ $\sec\theta$ ದ ಅನುಪಾತವು

a) $\frac{5}{3}$ b) $\frac{4}{3}$ c) $\frac{5}{4}$ d) $\frac{5}{13}$

29 . $\frac{1-\tan 45^0}{1+\tan 45^0}$ ಇದರ ಬೆಲೆ

a) 2 b) 0 C) 1 d) $90^0$

30. Sin $36^0$ ಯ ಸಮನಾದ ಬೆಲೆ

a) Cos $36^0$ b) cosec $36^0$ c) Cos $54^0$ d) Cosec $54^0$

31. ಒಂದು ಕಂಬದ ಮತ್ತು ಅದರ ನೆರಳಿನ ಉದ್ದದ ಅನುಪಾತವು $1:\sqrt{3}$ ಆದರೆ ಅದರ ಉನ್ನತ ಕೋನ

a) $0°$ b ) $30°$ c) $45°$ d) 60

32. $sin^2 A = 0$ ಆದರೆ $cosA$ ದ ಬೆಲೆ

a) $\sqrt{3}$ b) 0 C) 1 d) $2\sqrt{3}$

33. ಒಂದು ದತ್ತಾಂಶದ ಬಹುಲಕ ಮತ್ತು ಸರಾಸರಿಯು ಕ್ರಮವಾಗಿ **9** ಮತ್ತು **6** ಆಗಿದೆ. ಹಾಗಾದರೆ ಈ ದತ್ತಾಂಶದ ಮಧ್ಯಾಂಕ

a) 6.5 b) 7.0 c)7. 5 d) 8

34. 9,7,11,6,11,23,24 ಈ ಪ್ರಾಪ್ತಾಂಕಗಳ ಬಹುಲಕ

a.) 9 b) 7 c) 11 d) 23

35. **7**,10,**1**1 ,12 ಈ ದತ್ತಾಂಶದ ಸರಾಸರಿ

a) 9 b) 9.5 c) 10 d) 10.5

36. ಅರ್ಧ ಗೋಳದ ಘನಫಲವನ್ನು ಕಂಡುಹಿಡಿಯುವ ಸೂತ್ರ

a) $\frac{1}{3}\pi r^3$ b) $\frac{2}{3}\pi r^3$ c) $\frac{4}{3}\pi r^3$ d) $\frac{3}{4}\pi r^3$

37. ಉದ್ದ ,ಅಗಲ ಮತ್ತು ಎತ್ತರಗಳು ಕ್ರಮವಾಗಿ 10 cm , 8cm ಮತ್ತು 6cm ಇರುವ ಆಯತ ಘನದ ಘನಫಲ_____ಘ.ಮಾನಗಳು

a) 380 b) 480 c) 280 d) 580

38. ಶಂಕುವಿನ ಭಿನ್ನಕದ ಘನಫಲ ಕಂಡುಹಿಡಿಯುವ ಸೂತ್ರ_______________

a) $\pi(r_1+r_2)l$ b) $\pi(r_1+r_2)l+\pi r_1^2+\pi r_2^2$ c) $\frac{1}{3}\pi h(r_1^2+r_2^2+r_1r_2)l$ d) $\pi h(r_1+r_2)l$

39. ಸಿಲಿಂಡರಿನ ಎತ್ತರ ಅದರ ಪಾದದ ವ್ಯಾಸಕ್ಕೆ ಸಮನಾದರೆ ಅದರ ಪೂರ್ಣ ಮೇಲ್ಮೈ ವಿಸ್ತೀರ್ಣ

a) $6\pi r^2$ b) $8\pi r^2$ c) $\frac{3}{2}\pi r^2$ d) $3\pi r^2$

40. 6 cm ವ್ಯಾಸವಿರುವ ಗೋಳವನ್ನು ಕರಗಿಸಿ 0.2cm ತ್ರಿಜ್ಯವಿರುವ ತಂತಿಯನ್ನಾಗಿ ಮಾಡಲಾಗಿದೆ. ಈ ತಂತಿಯ ಉದ್ದ

a) 6 cm b) 700 cm C) 900cm d) 450 cm

# ವಿಜ್ಞಾನ

**ಕೆಳಗಿನ ಪ್ರತೀ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಗುರುತಿಸಿ ಬರೆಯಿರಿ**

41. ಮಿಶ್ರ ಲೋಹದ ರೋಧಶೀಲತೆಯು ಅದರ ಘಟಕ ಲೋಹಗಳಿಗಿಂತಲೂ _________.

A. ಹೆಚ್ಚಾಗಿರುತ್ತದೆ B. ಕಡಿಮೆಯಾಗಿರುತ್ತದೆ. C. ಸಮನಾಗಿರುತ್ತದೆ. D. ಮೇಲಿನ ಯಾವುದು ಅಲ್ಲ.

42. ಕಾಂತಕ್ಷೇತ್ರವು _________ ಮತ್ತು ಪರಿಮಾಣ ಎರಡನ್ನೂ ಹೊಂದಿದ ಪ್ರಮಾಣವಾಗಿದೆ.

A. ದಿಕ್ಕು B. ತೂಕ C. ಸಾಂದ್ರತೆ D. ಗುರುತ್ವ.

43. ಕಿರಣಗಳು ವಾಸ್ತವವಾಗಿ ಒಂದು ಹಂತದಲ್ಲಿ ಒಂದು ಬಿಂದುವಿನಲ್ಲಿ ಭೇಟಿಯಾದರೆ ಅಥವಾ ಭೇಟಿಯಾಗುವಂತೆ ಕಾಣಿಸಿದರೆ, ನಂತರ ಅಂತಹ ಕಿರಣಗಳು _____________.

A. ವಿಕೇಂದ್ರೀಕರಿಸುತ್ತವೆ. B. ಕೇಂದ್ರೀಕರಿಸುತ್ತವೆ. C. ಸಮಾನಾಂತರವಾಗಿರುತ್ತವೆ. D. ಮೇಲಿನ ಯಾವುದೂ ಅಲ್ಲ.

44. ಒಂದು ನಿಮ್ನ ಮಸೂರದ ಸಂಗಮ ದೂರವು 10 ಸೆಂ. ಮೀ ಇದೆ. ಮಸೂರದಿಂದ ಪ್ರತಿಬಿಂಬವು 5 ಸೆಂ. ಮೀ ದೂರದಲ್ಲಿ ಉಂಟಾಗಲು ವಸ್ತುವನ್ನು ಮಸೂರದಿಂದ ಏಷ್ಟು ದೂರದಲ್ಲಿ ಇಡಬೇಕು?

A. -5 ಸೆಂ. ಮೀ B. -10 ಸೆಂ. ಮೀ C. -15 ಸೆಂ. ಮೀ D. -20 ಸೆಂ. ಮೀ

45. 20 ರೋಧ ಹೊಂದಿರುವ ಒಂದು ವಿದ್ಯುತ್ ದೀಪ ಮತ್ತು 4 ರೋಧ ಹೊಂದಿರುವ ವಾಹಕವನ್ನು 6v ಶುಷ್ಕಕೋಶಕ್ಕೆ ಜೋಡಿಸಿದೆ. ಹಾಗಾದರೆ ಮಂಡಲದಲ್ಲಿ ಪ್ರವಹಿಸುವ ವಿದ್ಯುತ್ ಪ್ರವಾಹವು _________

A. 6 A. B. 24 A C. 0.25 A. D. 20 A

46. ಕೆಳಗಿನವುಗಲ್ಲಿ ಯಾವುದು ಮಸೂರದ ಸಾಮರ್ಥ್ಯದ SI ಏಕಮಾನವಾಗಿದೆ?

A. ಡಯಾಪ್ಟರ್. B. ಸೆಂಟಿಮೀಟರ್ C. ವ್ಯಾಟ್. D. ವಾಲ್ಟ್

47. ಜೈವಿಕ ಅನಿಲದ ಅತೀ ಮುಖ್ಯ ಘಟಕ ________

A. ಬ್ಯೂಟೇನ್. B. ಈಥೇನ್ C. ಪ್ರೊಫೇನ್. D. ಮೀಥೇನ್

48. ಕೆಳಗಿನ ಯಾವ ಒಂದು ಸಾಧನವು ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ?

A. ವಿದ್ಯುತ್ ಜನಕ. B. ವಿದ್ಯುತ್ ಮೋಟಾರ್ C. ವೋಲ್ಟ್ ಮೀಟರ್ D. ವಾಟರ್ ಹೀಟರ್.

49. ಒಂದು ಇಸ್ತ್ರಿ ಪೆಟ್ಟಿಗೆಯ ಮಂಡಲದಲ್ಲಿ 1kw ವಿದ್ಯುತ್ ಸಾಮರ್ಥ್ಯ ವನ್ನು220v ವಿಭವಾಂತರದಲ್ಲಿ ಬಳಸಿದಾಗ ಕೆಳಗಿನ ಯಾವ ಒಂದು ದರದ ಫ್ಯೂಸ್ ಬಳಸುವುದು ಸೂಕ್ತ?

A. 2A B. 3A. C. 4A. D. 5A

50. ನೇರ ವಿದ್ಯುತ್ ಪ್ರವಾಹಕ್ಕೆ ಹೋಲಿಸಿದರೆ ಪರ್ಯಾಯ ಪ್ರವಾಹದ ಒಂದು ಪ್ರಮುಖ ಅನುಕೂಲವೆಂದರೆ,

A. ವಿದ್ಯುತ್ ಶಕ್ತಿಯನ್ನು ದೂರದ ಸ್ಥಳಗಳಿಗೆ ಕಳುಹಿಸಬಹುದು.

B. ವಿದ್ಯುತ್ ಶಕ್ತಿಯನ್ನು ಹತ್ತಿರದ ಸ್ಥಳಗಳಿಗೆ ಕಳುಹಿಸಬಹುದು.

C. ದೂರದ ಸ್ಥಳಗಳಿಗೆ ಹೆಚ್ಚಿನ ಶಕ್ತಿಯು ನಶ್ವವಾಗದಂತೆ ಕಳುಹಿಸಬಹುದು.

D. ಹತ್ತಿರದ ಸ್ಥಳಗಳಿಗೆ ಹೆಚ್ಚಿನ ಶಕ್ತಿಯು ನಶ್ವವಾಗದಂತೆ ಕಳುಹಿಸಬಹುದು.

51. ಕೆಳಗಿನ ಒಂದು ಸಾಧನವು "ವಿದ್ಯುತ್ ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ" ತತ್ವವನ್ನಾದರಿಸಿದೆ.

A. ವಿದ್ಯುತ್ ಇಸ್ತ್ರೀ ಪೆಟ್ಟಿಗೆ B. ವಾಟರ್ ಹೀಟರ್

C. ವಿದ್ಯುತ್ ಕೆಟಲ್ D. ಮೇಲಿನ ಎಲ್ಲವೂ.

52. ಓಮ್ ನ ನಿಯಮದ ಪ್ರಕಾರ, ಒಂದು ವಾಹಕದ ರೋಧವು ಕೆಳಗಿನ ಯಾವುದರ ಮೇಲೆ ಅವಲಂಬಿತವಾಗಿದೆ?

A. ವಾಹಕದ ಉದ್ದ. B. ವಾಹಕದ ತೂಕ.

C. ವಾಹಕದ ಬಣ್ಣ. D. ವಾಹಕದ ರೂಪ.

53. ಗಾಳಿ ಯಂತ್ರಗಳಲ್ಲಿರುವ ಟರ್ಬೈನ್ಗಳಿಗೆ ವಿದ್ಯುತ್ ಶಕ್ತಿಯನ್ನು ಉತ್ಪಾದಿಸಲು ಬೇಕಾಗುವ ಕನಿಷ್ಠ ಗಾಳಿಯ ವೇಗ ಏಷ್ಟು?

A. 10 km/h B. 15 km/h. C. 20 km/h. D. 25 km/h

54. ದೃಷ್ಟಿಮಾಪನಗಾರರು ಕನ್ನಡಕವನ್ನು ತಯಾರಿಸುವಾಗ ಮಸೂರವನ್ನು +2.0 D ಎಂದು ಸೂಚಿಸಿದರೆ, ಆ ಕನ್ನಡದಲ್ಲಿ ಉಪಯೋಗಿಸಿರುವ ಮಸೂರವು _______ ಆಗಿರುತ್ತದೆ.

A. ಪೀನ ಮಸೂರ B. ನಿಮ್ನ ಮಸೂರ

C. ಸಮತಲ ಗಾಜು D. ಮೇಲಿನ ಯಾವುದೂ ಅಲ್ಲ.

55. ಅತ್ಯಂತ ಕ್ರಿಯಾಶೀಲ ಲೋಹಗಳನ್ನು ಲೋಹೋದ್ದರಣ ಮಾಡುವ ಅತ್ಯಂತ ನಿಖರ ಪ್ರಕ್ರಿಯೆಯು ________ ಆಗಿದೆ.

A. ಹುರಿಯುವಿಕೆ B. ಅಪಕರ್ಷಣೆ C. ವಿದ್ಯುದ್ವಿಭಜನೆ D. ಕಾಸುವಿಕೆ.

56. ಪರ್ಯಾಪ್ತ ಹೈಡ್ರೋಕಾರ್ಬನ್ ಗೆ ಉದಾಹರಣೆ _____

A. $C_4H_{10}$ B. $C_2H_6$ C. $C_2H_4$ D. $C_3H_8$

57. ಯಾವ ಒಂದು ಸ್ಥಿತಿಯನ್ನು ಹೊರತುಪಡಿಸಿ ಆಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ?

A. ಘನ ಸ್ಥಿತಿಯಲ್ಲಿದ್ದಾಗ. B. ದ್ರಾವಣ ಸ್ಥಿತಿಯಲ್ಲಿದ್ದಾಗ.

C. ಅನಿಲ ಸ್ಥಿತಿಯಲ್ಲಿದ್ದಾಗ. D. ಮೇಲಿನ ಎಲ್ಲಾ ಸ್ಥಿತಿಯಲ್ಲೂ.

58. PH ಮೌಲ್ಯವು 7 ಕ್ಕಿಂತ ಕಡಿಮೆ ಇರುವ ದ್ರಾವಣಗಳು ಸಾಮಾನ್ಯವಾಗಿ __________

A. ಹೆಚ್ಚು H+ ಆಯಾನುಗಳನ್ನು ಹೊಂದಿರುತ್ತವೆ.

B. ಹೆಚ್ಚು OH- ಅಯಾನುಗಳನ್ನು ಹೊಂದಿರುತ್ತವೆ.

C. H+ ಮತ್ತು OH- ಯಾನುಗಳನ್ನು ಸಮ ಪ್ರಮಾಣದಲ್ಲಿ ಹೊಂದಿರುತ್ತವೆ.

D. ಯಾವ ಆಯಾನುಗಳನ್ನೂ ಹೊಂದಿರುವುದಿಲ್ಲ.

59. ಕಾರ್ಬನ್ ಸಂಯುಕ್ತಗಳು ಒಂದೇ ಅಣುಸೂತ್ರವನ್ನು ಹೊಂದಿದ್ದು ಬೇರೆ ಬೇರೆ ರಚನಾ ಸೂತ್ರವನ್ನು ಹೊಂದಿದ್ದರೆ ಅಂತಹ ಗುಣಲಕ್ಷಣವನ್ನು ಏನೆಂದು ಕರೆಯುತ್ತಾರೆ?

A. ಕೆಟನೀಕರಣ B. ರಚನಾ ಸಮಾಂಗಿಗಳು C. ಅನುರೂಪ ಶ್ರೇಣಿ D. ಕ್ರಿಯಾ ಗುಂಪುಗಳು.

60. P, Q, R ಮತ್ತು S ಎಂಬ ನಾಲ್ಕು ಧಾತುಗಳು ಒಂದೇ 'ಆವರ್ತದಲ್ಲಿವೆ' ಮತ್ತು P, M, N ಹಾಗೂ O ಎಂಬ ನಾಲ್ಕು ಧಾತುಗಳು ಒಂದೇ 'ಗುಂಪಿನಲ್ಲಿವೇ'. ಹಾಗಾದರೆ ಯಾವ ಒಂದು ಧಾತುವಿನ ಪರಮಾಣು ಗಾತ್ರ ಹೆಚ್ಚು?

A. P. B. S. C. O. D. M

A. P. B. S. C. O. D. M

61. ಬೆಂಜೀನ್ ಸಂಯುಕ್ತ ದಲ್ಲಿರುವ ದ್ವಿಬಂಧಗಳ ಸಂಖ್ಯೆ ಏಷ್ಟು?

A. 2. B. 3. C. 4. D. 5.

62. "ಆವರ್ತಕ ನಿಯಮ"ವನ್ನು ಯಾರು ಮಂಡಿಸಿದರು?

A. ಜೋಹಾನ್ ವೂಲ್ಫ್ ಗ್ಯಾಂಗ್ ಡೋಬರೈನರ್. B. ಜಾನ್ ನ್ಯೂಲ್ಯಾಂಡ್ಸ್.

C. ಡಿಮಿಟ್ರಿ ಇವಾನೋವಿಚ್ ಮೆಂಡಲೀವ್. D. ಹೆನ್ರಿ ಮೋಸ್ಲೆ.

63. ಕೆಳಗಿನ ಯಾವ ಸಾಯುಕ್ತವು ನೀರಿನಲ್ಲಿ ಕರಗಿದಾಗ ಕ್ಷಾರವು ಉಂಟಾಗುತ್ತದೆ?

A. ಸಲ್ಫರ್ ಟ್ರೈಆಕ್ಸೈಡೆ B. ಸೋಡಿಯಂ ಆಕ್ಸೈಡ್

C. ಕಾರ್ಬನ್ ಡೈಆಕ್ಸೈಡ್ D. ಆಕ್ಸೈಡ್ಸ್ ಆಫ್ ನೈಟ್ರೋಜನ್.

64. ಉಭಯಧರ್ಮಿ ಆಕ್ಸೈಡ್ ಗಳು ಸಾಮಾನ್ಯವಾಗಿ ವರ್ತಿಸಬಹುದಾದ ಸಂಯುಕ್ತಗರಂದರೆ,

A. ಆಮ್ಲಗಳು B. ಪ್ರತ್ಯಾಮ್ಲಗಳು C. ಆಮ್ಲ ಮತ್ತು ಪ್ರತ್ಯಾಮ್ಲಗಳೆರೆಡೂ D. ಮೇಲಿನ ಯಾವುವೂ ಅಲ್ಲ.

65. ಡ್ರೋಕ್ಲೋರಿಕ್ ಆಮ್ಲವು ಸೋಡಿಯಂ ಕಾರ್ಬೊನೇಟ್ ಜೊತೆ ರಾಸಾಯನಿಕ ಕ್ರಿಯೆಗೆ ಒಳಪಟ್ಟಾಗ ಲವಣ ಉತ್ಪತ್ತಿಯಾಗುವುದರ ಜೊತೆಗೆ ಬಿಡುಗಡೆಯಾಗುವ ಅನಿಲವನ್ನು ಹೆಸರಿಸಿ.

A. ಹೈಡ್ರೋಜನ್ B. ಕ್ಲೋರಿನ್ C. ಆಮ್ಲಜನಕ D. ಕಾರ್ಬನ್ ಡೈಆಕ್ಸೈಡ್

66. C4H6 ಈ ಕಾರ್ಬನ್ ಸಂಯುಕ್ತ ರಾಸಾಯನಿಕ ಹೆಸರು ______

A. ಬ್ಯೂಟೇನ್ B. ಬ್ಯೂಟೀನ್ C. ಬ್ಯೂಟೈನ್ D. ಪೇಂಟೇನ್

67. ಸಸ್ಯಗಳಲ್ಲಿ ದ್ಯುತಿ ಸಂಶ್ಲೇಷಣೆ ಕ್ರಿಯೆಯಿಂದ ಉತ್ಪಾದನೆ ಯಾದ ಆಹಾರ ಪದಾರ್ಥವು ಯಾವ ಕ್ರಿಯೆಯಿಂದ ಎಲ್ಲಾ ಜೀವಕೋಶಗಳಿಗೆ ತಲುಪುತ್ತದೆ?

A. ದ್ಯುತಿ ಸಂಶ್ಲೇಷಣೆ ಕ್ರಿಯೆ. B. ಬಾಷ್ಪವಿಸರ್ಜನೆ

.. C ವಸ್ತುಸ್ಥಾನಂತರಣ D. ವಿಸರ್ಜನೆ

68. ಮಾನವನ ಹೃದಯದ ಈ ಕೋಣೆಯಿಂದ ಆಮ್ಲಜನಕ ಯುಕ್ತ ರಕ್ತವು ದೇಹದ ಉಳಿದ ಭಾಗಗಳಿಗೆ ಸಂಚರಿಸುತ್ತದೆ.

A. ಬಲ ಹೃತ್ಕರ್ಣ. B. ಎಡ ಹೃತ್ಕರ್ಣ. C. ಬಲ ಹೃತ್ಕುಕ್ಷಿ. D. ಎಡ ಹೃತ್ಕುಕ್ಷಿ.

69. ಆಯೋಡಿನ್ ಒಂದು ಸೂಕ್ಷ್ಮ ಪೋಷಕಾಂಶ ವಾಗಿದ್ದು, ಇದು ನಮ್ಮ ದೇಹದಲ್ಲಿ ಒಂದು ಹಾರ್ಮೋನ್ ನ್ನು ಸಂಶ್ಲೇಶಿಸಲು ಸಹಾಯಕವಾಗಿದೆ.ಆ ಹಾರ್ಮೋನು

A. ಬೆಳವಣಿಗೆ ಹಾರ್ಮೋನ್ B. ಥೈರಾಕ್ಸಿನ್ ಹಾರ್ಮೋನ್

C. ಅಡ್ರಿನಾಲಿನ್ ಹಾರ್ಮೋನ್ D. ಟೆಸ್ಟೋಸ್ಟೆರಾನ್ ಹಾರ್ಮೋನ್

70. ಕೆಳಗಿನವುಗಳಲ್ಲಿ ಹೊಂದಿಕೆಯಾಗದ ಜೋಡಿ

A. ದ್ಯುತಿ ಅನುವರ್ತನೆ - ಸ್ಪರ್ಶ. B. ಜಲಾನುವರ್ತನೆ - ನೀರು.

C. ಗುರುತ್ವಾನುವರ್ತನೆ - ಗುರುತ್ವ. D. ರಾಸಾಯನಿಕವರ್ತನೆ - ರಾಸಾಯನಿಕಗಳು.

71. ಪರಾವರ್ತಿತ ಚಾಪವನ್ನ ಬಿಂಬಿಸುವ ಸರಿಯಾದ ಅನುಕ್ರಮವನ್ನು ಗುರುತಿಸಿ.

1. ಗ್ರಾಹಕಗಳು
2. ಕಾರ್ಯ ನಿರ್ವಾಹಕಗಳು
3. ಸಂಬಂಧ ಕಲ್ಪಿಸುವ ನರಕೋಶ
4. ಜ್ಞಾನವಾಹಿ ನರಕೋಶ
5. ಕ್ರಿಯಾವಾಹಿ ನರಕೋಶ.

A. 1 2 3 4 5 B. 2 4 1 3 5 C. 1 4 3 5 2 D. 2 3 5 2 1

72. ಗರ್ಭನಿರೋಧಕ ಮಾತ್ರೆಗಳನ್ನು ಸೇವಿಸುವುದರಿಂದ ಗರ್ಭಧಾರಣೆ ಆಗೋವುದಿಲ್ಲ,ಇದಕ್ಕೆ ಕಾರಣ

A. ಮಾತ್ರೆಗಳು ಲಿಂಗಾಣುಗಳನ್ನು ಉತ್ಪಾದಿಸುವುದಿಲ್ಲ.

B. ಮಾತ್ರೆಗಳು ಅಂಡನಾಳಗಳನ್ನು ಮುಚ್ಚುತ್ತದೆ.

C. ಮಾತ್ರೆಗಳು ಹಾರ್ಮೋನುಗಳ ಸಮತೋಲನವನ್ನು ಬದಲಾಯಿಸುತ್ತವೆ.

D. ಮಾತ್ರೆಗಳು ವೀರ್ಯಾನುಗಳನ್ನು ಕೊಲ್ಲುತ್ತದೆ

73. ಸ್ವಕೀಯ ಪರಾಗಸ್ಪರ್ಶ ಕ್ರಿಯೆಯು ಈ ಕೆಳಗಿನ ಯಾವ ಹೂ ಗಳಲ್ಲಿ ಸಂಭವಿಸುತ್ತದೆ?

A. ಏಕಲಿಂಗಿ ಹೂಳಗಲ್ಲಿ B. ದ್ವಿಲಿಂಗಿ ಹೂಗಳಲ್ಲಿ

C. ಏಕ ಮತ್ತು ದ್ವಿಲಿಂಗಿ ಎರಡರಲ್ಲೂ D. ಮೇಲಿನ ಯಾವುದೂ ಅಲ್ಲ.

74. ಮಾನವನ ಜನನಾಂಗ ವ್ಯೂಹದಲ್ಲಿ ವೀರ್ಯ ಮತ್ತು ಅಂಡಗಳೆರೆಡು ಫಲಿಸುವ ಭಾಗ ಯಾವುದು?

A. ಗರ್ಭಕೋಶದಲ್ಲಿ. B. ಅಂಡನಾಳದಲ್ಲಿ. C. ಅಂಡಾಶಯದಲ್ಲಿ. D. ಯೋನಿಯಲ್ಲಿ.

75. ಮೆಂಡೆಲ್ ರವರು ಅನುವಂಶೀಯತೆಗೆ ಸಂಭಂದಿಸಿದಂತೆ ಯಾವ ಸಸ್ಯದ ಮೇಲೆ ಪ್ರಯೋಗಗಳನ್ನು ಕೈಗೊಂಡರು?

A. ಬಟಾಣಿ B. ಮಧ್ಯಾನ ಮಲ್ಲಿಗೆ

B. C. ದಾಸವಾಳ D. ಮೇಲಿನ ಯಾವುದೂ ಅಲ್ಲ.

76. ಆನುವಂಶಿಕ ಗುಣಲಕ್ಷಣಗಳನ್ನು ಪೋಷಕರಿಂದ ಸಂತತಿಗೆ ಮುಖ್ಯವಾಗಿ ರವಾನಿಸಲಾಗುವುದು.

A. ವಂಶವಾಹಿಗಳಿಂದ. B. ಲಿಂಗಾಣುಗಳಿಂದ.

C. ಮತ್ತೊಂದು ಜೀವಿಗಳಿಂದ. D. ಮೇಲಿನ ಯಾವುದೂ ಅಲ್ಲ.

77. ಪಳೆಯುಳಿಕೆ ವಯಸ್ಸನ್ನು ಕಂಡುಹಿಡಿಯುವ ಸಾಮಾನ್ಯ ವಿಧಾನವೆಂದರೆ.

A. ಕ್ಷ- ಕಿರಣ B. MMR C. ಕಾರ್ಬನ್ ಡೇಟಿಂಗ್ D. ಮೇಲಿನ ಯಾವುದೂ ಅಲ್ಲ.

78. CFC ಯ ಯಾವ ಘಟಕವು ಓಝೋನ್ ಪದರವನ್ನು ತೆಳುವಾಗಿಸುತ್ತದೆ?

A. ಕಾರ್ಬನ್ B. ಕ್ಲೋರಿನ್ C. ಫ್ಲೋರಿನ್ D. ಆಮ್ಲಜನಕ.

79. ಚಿಪ್ಕೋ ಆಂದೋಲನವು ಕೆಳಗಿನ ಯಾವುದಕ್ಕೆ ಸಂಬಂಧಿಸಿದ್ದು?

**A.** ಮಣ್ಣಿನ ಸಂರಕ್ಷಣೆ B. ಕಾಡಿನ ಸಂರಕ್ಷಣೆ

**B.** ಮೇಲಿನ a ಮತ್ತು b ಎರಡೂ D. ಮೇಲಿನ ಯಾವುದೂ ಅಲ್ಲ.

80. ಖಾದಿನ್, ಬುಂಧೀಸ್, ಆಹರ್ ಮತ್ತು ಕಟ್ಟಗಳು ಸಾಂಪ್ರದಾಯಿಕ ಪದ್ಧತಿಗಳಾಗಿದ್ದು. ಇದಕ್ಕೆ ಉದಾಹಣೆಯಾಗಿದೆ _________

A. ಕಾಲಿನ ಶೇಖರಣೆ. B. ಮರದ ಶೇಖರಣೆ.

B. ನೀರಿನ ಕೊಯ್ಲು. D. ಮಣ್ಣಿನ ಸಂರಕ್ಷಣೆ.

# ಸಮಾಜವಿಜ್ಞಾನ

**ಕೆಳಗಿನ ಪ್ರತೀ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಗುರುತಿಸಿ ಬರೆಯಿರಿ**

81."ದ್ವಿ ಪ್ರಭುತ್ವ ಪದ್ಧತಿಯನ್ನು" ಜಾರಿಗೊಳಿಸಿದವರು

A) ಲಾರ್ಡ್ ಕಾರ್ನ್ ವಾಲೀಸ್ B) ಡಾಲ್ ಹೌಸಿ C) ಲಾರ್ಡ್ ಕರ್ಜನ್ D) ರಾಬರ್ಟ್ ಕ್ಲೈವ್

82.ಪೇಶ್ವೆ ಬಾಜಿರಾಯ್ ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿದ್ದು ಈ ಒಪ್ಪಂದದಂತೆ

A) ಸಾಲ್ಬಾಯ್ ಒಪ್ಪಂದ B) ಬೆಸ್ಸೀನ್ ಒಪ್ಪಂದ

C) ಪೂನಾ ಒಪ್ಪಂದ D) ಲಾಹೋರ್ ಒಪ್ಪಂದ

83.ದಿವಾನಿ ಅದಾಲತ್ ಎಂಬುದು

A) ನಾಗರೀಕ ನ್ಯಾಯಾಲಯ B) ಕಂದಾಯ ನ್ಯಾಯಾಲಯ

C) ಅಪರಾಧ ನ್ಯಾಯಾಲಯ D) ಗ್ರಾಹಕ ನ್ಯಾಯಾಲಯ

84.ರಾಣಿ ಚೆನ್ನಮ್ಮ ದತ್ತು ಪಡೆದ ಪುತ್ರ

A) ಸಂಗೊಳ್ಳಿ ರಾಯಣ್ಣ B) ಶಿವಲಿಂಗರುದ್ರ ಸರ್ಜ C) ಶಿವಲಿಂಗಪ್ಪ D) ವೆಂಕಟಪ್ಪ

85.ಸತ್ಯಶೋಧಕ ಸಮಾಜದ ಸ್ಥಾಪಕರು

A) ಆತ್ಮರಾಮ ಪಾಂಡು ರಂಗ B) ಜ್ಯೋತಿ ಬಾಪುಲೆ C) ದಯಾನಂದ ಸರಸ್ವತಿ D) ಸ್ವಾಮಿ ವಿವೇಕಾನಂದ

86. 1857ರ ದಂಗೆಯು ಆರಂಭಕ್ಕೆ ತತ್ ಕ್ಷಣದ ಕಾರಣ

A) ಮಂಗಲ ಪಾಂಡೆಯನ್ನು ಗಲ್ಲಿಗೇರಿಸಿದ್ದು

B) ಮಂಗಲ ಪಾಂಡೆ ಬ್ರಿಟಿಷ್ ಅಧಿಕಾರಿಯನ್ನು ಕೊಂದಿದ್ದು

C) ಇಂಗ್ಲೀಷರು ಜಾರಿಗೊಳಿಸಿದ ಕಾನೂನುಗಳು

D) ರಾಯಲ್ ಎನ್ ಪೀಲ್ಡ್ ಬಂದೂಕುಗಳಿಗೆ ದನದ ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹರಡಿದ್ದು

87. 1919ರ ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿ ನೈಟ್ ಹುಡ್ ಪದವಿಯನ್ನು ಹಿಂತಿರುಗಿಸಿದವರು

A) ರವೀಂದ್ರನಾಥ ಟ್ಯಾಗೋರ್ B) ಲಾಲಾಲಜಪತ್ ರಾಯ್

C) ಗೋಪಾಲಕೃಷ್ಣ ಗೋಖಲೆ D) ಸರ್ಧಾರ್ ವಲ್ಲಭ ಭಾಯಿ ಪಟೇಲ್

88. ಗಾಂಧಿಜೀಯವರು ಈ ಹಿಂಸಾತ್ಮಕ ಘಟನೆಯಿಂದಾಗಿ ಅಸಹಕಾರ ಚಳುವಳಿಯನ್ನು ಹಿಂದಕ್ಕೆ ಪಡೆದರು

A) ಜಲಿಯನ್ ವಾಲಾಬಾಗ್ B) ಕಾನ್ಪೂರ್ ಹತ್ಯಾಕಾಂಡ

C) ಉತ್ತರ ಪ್ರದೇಶದ ಚೌರಿಚೌರ D) ಕಪ್ಪು ಕೋಣೆಯ ದುರಂತ

89.ಬಂಗಾಳದಲ್ಲಿ ರಕ್ಷಾ ಬಂಧನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರ ಮುಖ್ಯ ಉದ್ದೇಶ

A) ಹಿಂದೂಗಳನ್ನು ಸಂಘಟಿಸಲು

B) ಜನರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಲು

C) ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಸಾಧಿಸಲು

D )ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರತೆಯನ್ನು ನೀಡಲು..

90.ಬಂಗಾಳ ವಿಭಜನೆಯನ್ನು ರೂಪಿಸಿದ ವೈಸರಾಯ್

A) ಲಾರ್ಡ್ ಕಾರ್ನ್ ವಾಲೀಸ್ B) ಡಾಲ್ ಹೌಸಿ

C) ಲಾರ್ಡ್ ಕರ್ಜನ್ D) ರಾಬರ್ಟ್ ಕ್ಲೈವ್

91."ನನಗೆ ರಕ್ತ ಕೊಡಿ,ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಯತ್ನಿಸುತ್ತೇನೆ" ಎಂದು ಹೇಳಿದವರು

A) ಭಗತ್ ಸಿಂಗ್ B) ಬಾಲಗಂಗಾಧರ ತಿಲಕ್

C) ಸುಭಾಷ್ ಚಂದ್ರ ಬೋಸ್ D) ಲಾಲ ಲಜಪತ್ ರಾಯ್

92.ದೇಶಿಯ ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ಸೇರಿಸುವಲ್ಲಿ ಯಶಸ್ವಿಯಾದವರು

A) ನೆಹರು B) ಸರ್ಧಾರ್ ವಲ್ಲಭ ಭಾಯಿ ಪಟೇಲ್

C) ಲಾರ್ಡ್ ಮೌಂಟ್ ಬ್ಯಾಟನ್ D) ಮಹಾತ್ಮ ಗಾಂಧಿ

93.ವೆಂಕಟಪ್ಪ ನಾಯಕ ದಂಗೆ ಎದ್ದದ್ದು

A) ಕಿತ್ತೂರಿನಲ್ಲಿ B) ಕೊಪ್ಪಳದಲ್ಲಿ

C) ಸುರಪುರದಲ್ಲಿ D) ಅಮರ ಸುಳ್ಯದಲ್ಲಿ

94.ಕರ್ನಾಟಕದಲ್ಲಿ ಡಿ.ಎಂ ನಂಜುಂಡಪ್ಪ ಸಮಿತಿಯು ವರದಿ ನೀಡಿದ್ದು

A) ಅಸ್ಪೃಶ್ಯತೆ ಆಚರಣೆಯ ಬಗ್ಗೆ B) ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬಗ್ಗೆ

C) ಕೋಮುಗಲಭೆಗಳ ಬಗ್ಗೆ D) ಪ್ರಾದೇಶಿಕ ಅಸಮತೋಲನದ ಬಗ್ಗೆ

95.ಭಾರತೀಯ ಸಂವಿಧಾನದ 51 ನೇ ವಿಧಿಯ ಮೂಲ ಉದ್ದೇಶ

A) ಉಚಿತ ಮತ್ತು ಕಡ್ಡಾಯ ಶಿಕ್ಷಣ

B) ಅಂತರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರಾಷ್ಟ್ರೀಯ ಕಾನೂನಿಗೆ ಗೌರವ ನೀಡುವುದು

C)ಸಾಮಾಜಿಕ ನ್ಯಾಯ ಮತ್ತು ಜನರ ಕಲ್ಯಾಣ

D) ಏಕರೂಪದ ಪಂಚಾಯತ್ ಸಂಸ್ಥೆಗಳ ಸ್ಥಾಪನೆ

96.ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು

A) ಭಾರತ ಮತ್ತು ರಷ್ಯ B) ಭಾರತ ಮತ್ತು ಅಮೇರಿಕಾ

C) ಭಾರತ ಮತ್ತು ಚೀನಾ D) ಭಾರತ ಮತ್ತು ಪಾಕಿಸ್ತಾನ

97.ಮಾನವ ಹಕ್ಕುಗಳ ಪರಿಕಲ್ಪನೆಯನ್ನು 1948 ಡಿಸೆಂಬರ್ 10 ರಂದು ಅಂಗೀಕರಿಸಿದ್ದು

A) ಅಂತರಾಷ್ಟ್ರೀಯ ನ್ಯಾಯಾಲಯದಲ್ಲಿ B) ಸಾಮಾನ್ಯ ಸಭೆಯಲ್ಲಿ

C) ಭದ್ರತಾ ಸಮಿತಿಯಲ್ಲಿ D) ಆರ್ಥಿಕ ಮತ್ತು ಸಾಮಾಜಿಕ ಸಮಿತಿಯಲ್ಲಿ

98.ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದ ಸಂವಿಧಾನದ ವಿಧಿ

A) 24 ನೇ ವಿಧಿ B) 17 ನೇ ವಿಧಿ

C) 28 ನೇ ವಿಧಿ D) 51 ನೇ ವಿಧಿ

99.ಭೂ ರಹಿತ ಕೃಷಿ ಕಾರ್ಮಿಕರು ಈ ವಲಯಕ್ಕೆ ಸೇರಿದವರು

A) ಸರ್ಕಾರಿ ವಲಯ B) ಸಂಘಟಿತ ವಲಯ

C) ಅಸಂಘಟಿತ ವಲಯ D) ಸಂಭಾವನೆ ರಹಿತ ವಲಯ

100.ವಿಶ್ವ ಸಂಸ್ಥೆಯ "ಸಚಿವ ಸಂಪುಟ" ಎಂದು ಕರೆಯಲ್ಪಡುವ ಅಂಗ ಸಂಸ್ಥೆ

A) ಭದ್ರತಾ ಸಮಿತಿ B) ಧರ್ಮದರ್ಶಿ ಸಮಿತಿ

C) ಅಂತರಾಷ್ಟ್ರೀಯ ನ್ಯಾಯಾಲಯ D) ಸಾಮಾನ್ಯ ಸಭೆ

101.ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿಯ ನೇತೃತ್ವ ವಹಿಸಿದವರು

A) ಮೇಧಾ ಪಾಟ್ಕರ್ B) ಶಿವರಾಮ ಕಾರಂತ

C) ಸುಂದರ್ ಲಾಲ್ ಬಹುಗುಣ D) ಕುಸುಮ ಸೊರಬ್

102.ಬಾಲ ಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೆ ಬಂದ ವರ್ಷ

A) 1886 B) 1986

C) 2016 D) 1996

103.ಭಾರತದ ಅತ್ಯಂತ ಎತ್ತರವಾದ ಶಿಖರ

A) ಗುರು ಶಿಖರ B) ಕೆ2 (ಗಾಡ್ವಿನ್ ಆಸ್ಟಿನ್)

C) ಮೌಂಟ್ ಎವರೆಸ್ಟ್ D) ಮುಳ್ಳಯ್ಯನ ಗಿರಿ

104.ರೂಯ್ಲಿ ಪ್ರಖ್ಯಾತವಾಗಿರುವುದು

A) ಭಾರತದಲ್ಲಿ ಅಧಿಕ ಉಷ್ಣಾಂಶ ಪಡೆಯುವುದಕ್ಕೆ

B) ಭಾರತದಲ್ಲಿ ಕಡಿಮೆ ಉಷ್ಣಾಂಶ ಪಡೆಯುವುದಕ್ಕೆ

C) ಭಾರತದಲ್ಲಿ ಅಧಿಕ ಮಳೆ ಪಡೆಯುವುದಕ್ಕೆ

D) ಭಾರತದಲ್ಲಿ ಕಡಿಮೆ ಮಳೆ ಪಡೆಯುವುದಕ್ಕೆ

105.ಪರ್ವತ ಮಣ್ಣು ಉತ್ಪತ್ತಿಯಾಗುವುದು

A) ಜೈವಿಕ ವಸ್ತುಗಳು ಕೊಳೆಯುವುದರಿಂದ B) ಕಲ್ಲಿದ್ದಲು ಕೊಳೆಯುವುದರಿಂದ

C) ಕೊಳೆತ ಅಜೈವಿಕ ವಸ್ತುಗಳಿಂದ D) ಅಧಿಕ ಮಳೆ ಮತ್ತು ಅಧಿಕ ಉಷ್ಣಾಂಶದಿಂದ

106.ಅಧಿಕ ಮಳೆ ಬೀಳುವ ಜವುಗು ಪ್ರದೇಶ,ನದಿಮುಖಜ ಭೂಮಿ ಮತ್ತು ಸಮುದ್ರ ತೀರ ಪ್ರದೇಶಗಳಲ್ಲಿ ಕಂಡು ಬರುವ ಕಾಡುಗಳು

A) ನಿತ್ಯ ಹರಿದ್ವರ್ಣದ ಕಾಡುಗಳು B) ಮಾನ್ಸೂನ್ ಕಾಡುಗಳು

C) ಮ್ಯಾಂಗ್ರೋವ್ ಕಾಡುಗಳು D) ಪರ್ವತ ಕಾಢುಗಳು

107.ದಕ್ಷಿಣ ಭಾರತದಲ್ಲೇ ಉದ್ದವಾದ ನದಿ

A) ಗೋದಾವರಿ B) ಗಂಗಾ

C) ಕೃಷ್ಣಾ D) ಕಾವೇರಿ

108.ಬೆಳೆ ಮತ್ತು ಪಶುಪಾಲನೆಗಳೆರಡನ್ನೂ ಒಳಗೊಂಡ ಕೃಷಿ ಪದ್ಧತಿ

A) ತೋಟಗಾರಿಕೆ B) ಆರ್ದ್ರ ಬೇಸಾಯ

C) ಸಾಂದ್ರ ಬೇಸಾಯ D) ಮಿಶ್ರ ಬೇಸಾಯ

109. ಭಾರತದ ಪೂರ್ವ ಕರಾವಳಿಯ ಬಂದರು

A) ಎನ್ನೋರ್ B) ಮಂಗಳೂರು

C) ಗೋವಾ D) ಕಾಂಡ್ಲ

110.ಭಾರತದಲ್ಲಿನ ಅರಣ್ಯ ಆಧಾರಿತ ಕೈಗಾರಿಕೆ

A) ಬಟ್ಟೆ ಕೈಗಾರಿಕೆ B) ಕಾಗದ ಕೈಗಾರಿಕೆ

C) ಸಕ್ಕರೆ ಕೈಗಾರಿಕೆ D) ಕಬ್ಬಿಣ ಕೈಗಾರಿಕೆ

111.ಪರ್ಯಾಯ ದ್ವೀಪ ವಲಯ 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಎಂದು ಪರಿಗಣಿಸಲಾಗಿದೆ. ಕಾರಣ

A) ಭೂಕಂಪಗಳು ಸಂಭವಿಸುವುದು ಕಡಿಮೆ

B) ಭೂಕಂಪಗಳು ಸಂಭವಿಸುವುದು ಸಾಧಾರಣ

C) ಭೂಕಂಪಗಳು ಸಂಭವಿಸುವುದೇ ಇಲ್ಲ

D) ಭೂಕಂಪಗಳು ಸಂಭವಿಸುವುದು ಹೆಚ್ಚು

112.ಹೊಸ ಭೂ ಸಾರಿಗೆಯ ವಿಧಾನ

A) ರೈಲು ಸಾರಿಗೆ B) ಕೊಳವೆ ಮಾರ್ಗ

C) ಗಡಿ ಸಾರಿಗೆ D) ವಾಯು ಸಾರಿಗೆ

113. ಕರ್ನಾಟಕದ ಹೆಬ್ಬಾಗಿಲು ಎಂದು ಕರೆಯಲ್ಪಡುವ ಬಂದರು

A) ಕೊಲ್ಕತ್ತ B) ಚೆನ್ನೈ

C) ಮುಂಬಯಿ D) ನವ ಮಂಗಳೂರು

114.ಲಿಂಗಾನುಪಾತ ಎಂದರೆ

A) ಪ್ರತಿ 100 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ

B) ದೇಶದಲ್ಲಿರುವ ಒಟ್ಟು ಮಹಿಳೆ ಮತ್ತು ಪರುಷರ ಸಂಖ್ಯೆ

C) ಪ್ರತಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ

D) ಪುರುಷ ಮತ್ತು ಮಹಿಳೆಯರ ಅನುಪಾತ

115.ಭಾರತದ ನೈಜ ಅಬಿವೃದ್ಧಿಯೆಂದರೆ ಅದು ಗ್ರಾಮಗಳ ಅಭಿವೃದ್ಧಿ ಎಂದವರು

A) ಅಂಬೇಡ್ಕರ್ B) ಮಹಾತ್ಮ ಗಾಂಧಿ

C) ನೆಹರು D) ಬಾಲ್ಡವಿನ್

116. ಮಹಿಳಾ ಸ್ವ ಸಹಾಯ ಸಂಘಗಳ ಮುಖ್ಯ ಉದ್ದೇಶ

A) ಗ್ರಾಮೀಣ ಬಡ ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು

B) ಗ್ರಾಮೀಣ ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡಲು

C) ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಒದಗಿಸಲು

D) ಗ್ರಾಮೀಣ ಮಹಿಳೆಯರನ್ನು ಸಂಘಟಿಸಲು

117.ರೇವಣಿ ಹಣವನ್ನು ನಿಗದಿತ ಅವಧಿಗೆ ಇಡಬಹುದಾದ ಖಾತೆ

A) ಉಳಿತಾಯ ಖಾತೆ B) ಆವರ್ತ ರೇವಣಿ ಖಾತೆ

C) ನಿಶ್ಚಿತ ರೇವಣಿ ಖಾತೆ D) ಚಾಲ್ತಿ ಖಾತೆ

118."ಬ್ಯಾಂಕುಗಳ ತಾಯಿ"

A) ಕೆನರಾ ಬ್ಯಾಂಕು B) ಭಾರತೀಯ ಸ್ಟೇಟ್ ಬ್ಯಾಂಕ್

C) ಭೂ ಅಭಿವೃದ್ಧಿ ಬ್ಯಾಂಕ್ D) ಭಾರತೀಯ ರಿಸರ್ವ್ ಬ್ಯಾಂಕ್

119.ಮಾರುಕಟ್ಟೆಯ ರಾಜ ಎಂದು ಕರೆಯುವುದು

A) ಗ್ರಾಹಕ B) ಉತ್ಪಾದಕ

C) ಪೂರೈಕೆದಾರ D) ವ್ಯಾಪಾರಿ

120.ಪರಿಹಾರದ ಮೊತ್ತ ಒಂದು ಕೋಟಿ ರೂಪಾಯಿಗಳನ್ನು ಮೀರಿದ್ದರೆ ದೂರನ್ನು ಈ ಅಯೋಗಕ್ಕೆ ಸಲ್ಲಿಸಬೇಕು.

A) ಜಿಲ್ಲಾ ಅಯೋಗ B) ರಾಜ್ಯ ಅಯೋಗ

C) ರಾಷ್ಟ್ರೀಯ ಅಯೋಗ